

'ನರ್ಮದಾ ಬಚಾವ್' ಆಂದೋಲನದಲ್ಲಿ ಬಾಬಾ ಆಮ್ಟೆ (ಎಡಭಾಗದಲ್ಲಿರುವವರು) ಮತ್ತು ಮೇಧಾ ಪಾಟ್ಕರ್

ತೆಹ್ರಿ ಅಣೆಕಟ್ಟೆ ನಿರ್ಮಾಣವನ್ನು ವಿರೋಧಿಸಿ ಭಾಗೀರತಿ ನದಿ ದಂಡೆಯಲ್ಲಿ 54 ದಿನಗಳ ಉಪವಾಸ ನಡೆಸಿದ ಸುಂದರಲಾಲ್ ಬಹುಗುಣ



'ನರ್ಮದಾ ಬಚಾವ್' ಆಂದೋಲನ ಭಾರತದಲ್ಲಿ ಸ್ವಾತಂತ್ರ್ಯಾ ನಂತರದ ಮೊದಲ ಬೃಹತ್ ಸಾಮಾಜಿಕ ಚಳವಳಿ ಎಂದು ಖ್ಯಾತವಾಯಿತು. ಸಾಮಾಜಿಕ ಚಳವಳಿ ಯಾವ ಸ್ವರೂಪದ್ದಾಗಿರಬೇಕು ಎಂಬ ಪ್ರಥಮ ಪಾಠ ಕಲಿಸಿದ ಚಳುವಳಿ ಎಂದೇ ಇತಿಹಾಸದಲ್ಲಿ ದಾಖಲಾಗಿದೆ.

## ಭಾರತದ ಹಸಿರು ಹೋರಾಟಗಳು

ಇದುವರೆಗೆ ಭಾರತದಲ್ಲಿ ಇಪ್ಪತ್ತಕ್ಕೂ ಹೆಚ್ಚು ದೊಡ್ಡ ಪ್ರಮಾಣದ ಪರಿಸರ ಹೋರಾಟಗಳು ನಡೆದಿವೆ. ಅದರಲ್ಲಿ ಏಳೆಂಟು ಹೋರಾಟಗಳು, ಆಳುವ ವರ್ಗದ ನಿದ್ದೆಗೆಡಿಸಿ, ತಳೆದ ನಿರ್ಧಾರ ಮತ್ತು ಹಮ್ಮಿಕೊಂಡ ಯೋಜನೆ ಎರಡನ್ನೂ ಕೈಬಿಡುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಭಾರತದಲ್ಲಿ ನಡೆದ ಪ್ರಮುಖ ಪರಿಸರ ಚಳವಳಿಗಳನ್ನು ಪರಿಚಯಿಸಿಕೊಳ್ಳಲು ಇದು ಸಕಾಲ.

## ಬಿಷ್ಣೋಯಿ ಹೋರಾಟ

ಸಾವಿರದ ಏಳುನೂರನೆ ಇಸವಿಯಲ್ಲಿ ಬಿಷ್ಣೋಯಿ ಜನಾಂಗದ ಮಹಿಳೆಯರು ಪವಿತ್ರ ಮರಗಳ ಕಡಿತದ ವಿರುದ್ಧ ಸಾರಿದ ಪ್ರತಿಭಟನೆಯೇ ಭಾರತದ ಮೊದಲ ಪರಿಸರ ಹೋರಾಟ ಎನ್ನಬಹುದು. ರಾಜಸ್ಥಾನದ ಮಾರವಾರ ಪ್ರಾಂತ್ಯದ ಖೇಜರ್ಲಿ ಎಂಬ ಊರಿನ ಬಳಿ, ಅಂದಿನ ಮಹಾರಾಜರ ಹೊಸ ಅರಮನೆ ನಿರ್ಮಾಣಕ್ಕಾಗಿ ಸೈನಿಕರು ಮರ ಕಡಿಯಲು ಮುಂದಾದರು. ಹದಿನೈದನೇ ಶತಮಾನದಲ್ಲಿ ಗುರು ಜಂಬಾಜಿಯಿಂದ ಅಸ್ತಿತ್ವಕ್ಕೆ ಬಂದ 'ಬಿಷ್ಣೋಯಿ ಪಂಥ' ಮರ ಕಡಿಯುವುದು ಮತ್ತು ಪ್ರಾಣಿ ವಧೆಯನ್ನು ನಿಷೇಧಿಸಿತ್ತು. ದೈವ ಸ್ವರೂಪಿಯಾದ ಮರಗಳನ್ನು ಕಡಿಯುವುದರ ವಿರುದ್ಧ ದನಿ ಎತ್ತಿನಿಂತ ಮಹಿಳೆ ಅಮೃತಾದೇವಿ, ತನ್ನ ಇತರ ಮಹಿಳಾ ಸ್ನೇಹಿತರ ಜೊತೆ ಸೇರಿ ಮರಗಳ ಸುತ್ತ ಸರಪಳಿ ರಚಿಸಿ ಪ್ರತಿಭಟಿಸಿದರು. ರಾಜಾಜ್ಞೆಯನ್ನು ಮೀರಲಾಗದ ಸೈನಿಕರು ಅವರನ್ನು ಅಲ್ಲಿಂದ ಸರಿಸುವ ಪ್ರಯತ್ನದಲ್ಲಿ ಅಮೃತಾದೇವಿ ಸಹಿತ 363 ಜನರನ್ನು ಕೊಂದು ಹಾಕಿ, ಮರಗಳನ್ನು ಕಡಿದು ಸಾಗಿಸಿದರು. ಈ ಮಾರಣಹೋಮದ ಸುದ್ದಿ ತಿಳಿದ ರಾಜ ಕೂಡಲೇ ಅಲ್ಲಿಗೆ ಬಂದು, ಆದ ಅನಾಹುತದಿಂದ ಕಂಗಾಲಾಗಿ, ಉಳಿದ ಹಳ್ಳಿಗರಲ್ಲಿ ಕ್ಷಮೆಯಾಚಿಸಿದ, ಮರ ಕಡಿಯುವುದನ್ನು ನಿಲ್ಲಿಸಿದ. ಅಂದಿನಿಂದ 'ಇಡೀ ಪ್ರಾಂತ್ಯದಲ್ಲಿ ಯಾರೂ ಮರ ಕಡಿಯಕೂಡದು, ಅದು ದೇವರ ಸಮಾನ' ಎಂದು ಆಜ್ಞೆ ಹೊರಡಿಸಿದ. ಅಂದಿನ ನಿಯಮ ಆ ಭಾಗದಲ್ಲಿ ಇಂದಿಗೂ ಜಾರಿಯಲ್ಲಿದೆ.

## ಚಿಪ್ಕೋ ಚಳವಳಿ

ಚಿಪ್ಕೋ ಆಂದೋಲನವನ್ನು ಭಾರತ ಮತ್ತು ವಿಶ್ವದ ನೆಲೆಯಲ್ಲಿ 'ಭಾರತದ ಪ್ರಥಮ ಪರಿಸರ ಚಳವಳಿ' ಎಂದೇ ಗುರುತಿಸಲಾಗಿದೆ. ಮರಗಳನ್ನು ಅಪ್ಪಿ ಹಿಡಿದು ಕಡಿಯಲು ಬಂದವರನ್ನು ಹಿಮ್ಮೆಟ್ಟಿಸಿ ಓಡಿಸುವ ಈ ಕ್ರಮವನ್ನು ಹೇಳಿಕೊಟ್ಟವರು ಸುಂದರಲಾಲ್ ಬಹುಗುಣ. ಅದನ್ನು ಅಕ್ಷರಶಃ ಪಾಲಿಸಿದವರು ಚಂಡೀಪ್ರಸಾದ್ ಭಟ್ ಎಂಬ ಜನನಾಯಕ. ಅಲಕಾನಂದ ನದಿಯಿಂದ ಉಂಟಾದ ಪ್ರವಾಹದಿಂದ ನಾಶ ಅನುಭವಿಸಿದ್ದ ಜನ, ಮರಗಳ ಕಡಿತ ಮತ್ತು ಉರುಳಿಸುವಿಕೆಯಿಂದ ಮಣ್ಣಿನ ಮೇಲ್ಮೈ ಸವೆತ ಜಾಸ್ತಿಯಾಗಿ ಪರಿಸ್ಥಿತಿ ಬಿಗಡಾಯಿಸಿದ್ದನ್ನು ಅರಿತು, ಮರಗಳ ಸಂರಕ್ಷಣೆಗೆ ಮುಂದಾಗಿದ್ದರು. ನದಿಯ ಜಲಾನಯನ ಪ್ರದೇಶದ